**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.72/2020**

**(ಚಾ.ಸಾ.2/ಪ್ರಾ.ಸಾ.6)**

ತಾಃ 10.07.2023 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ಮುರುಳಿ |
| ತಂದೆಯ ಹೆಸರು | ನಾರಾಯಣಪ್ಪ |
| ವಯಸ್ಸು | 39 ವರ್ಷ |
| ಉದ್ಯೋಗ | ಸಬ್ ಇನ್ಸ್ ಪೆಕ್ಟರ್ (At present suspended) |
| ವಾಸ ಸ್ಥಳ | ದಾಬಾಸ್ ಪೇಟೆ |

**<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ</u>**

ನಾನು 2019 ನೇ ಇಸವಿ ಜುಲೈ ತಿಂಗಳಿನಿಂದ ಆಗಸ್ಟ್ 2020 ರವರೆಗೆ ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ಅಪರಾಧ ವಿಭಾಗದಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನು. ದಿಃ22.07.2019 ರಂದು ಒಂದು ಅನಾಮದೇಯ ಮೃತ ದೇಹ ತೋಟದ ಗುಡ್ಡದಹಳ್ಳಿಯಲ್ಲಿ ಪತ್ತೆ ಆಗಿರುತ್ತದೆ. ಅದಕ್ಕೆ ಸಂಬಂಧಿಸಿದಂತೆ ದಿಃ23.07.2019 ರಂದು ಕಲಂ 302 ರ ಅಡಿಯಲ್ಲಿ ಮೊಕದ್ದಮೆ

ನೊಂದಾಯಿಸಿರುತ್ತೇನೆ. ಸದರಿ ಪ್ರಕರಣದ ತನಿಖೆಯನ್ನು ಚಾಸಾ.1 ರವರು ಮಾಡುತ್ತಿದ್ದರು. ಮೃತ ವ್ಯಕ್ತಿಯ ಹೆಸರು ಸ್ಥಳದಲ್ಲಿ ಹಾಜರಿದ್ದ ಪ್ರತ್ಯಕ್ಷದರ್ಶಿ ತಿಳಿಸಿದ್ದು ಅದರಂತೆ ಮಂಜುನಾಥ ಎಂದು ತಿಳಿದು ಬಂದಿದ್ದು ಸದರಿ ಕೃತ್ಯವನ್ನು ಚಂದನ್, ಚರಣ್, ಮದನ್, ಮಂಜುನಾಥ, ಕಿರಣ್, ಗುರು ಎಂಬುವವರು ಚಾಕುವಿನಿಂದ ಚುಚ್ಚಿ ಕೊಲೆ ಮಾಡಿರುವುದಾಗಿ ತಿಳಿಸಿರುತ್ತಾರೆ.

2. ಸದರಿ ಪ್ರಕರಣದ ಆರೋಪಿತರ ಪತ್ತೆಗಾಗಿ ಚಾಸಾ.1 ರವರು ಒಂದು ತಂಡ ರಚಿಸಿ ಅದರಲ್ಲಿ ನಾನು, ಚಾಸಾ.3 ರಿಂದ 5 ಹಾಗೂ ಚಾಸಾ.1 ರವರು ಇದ್ದೇವು. ದಿಃ07.08.2019 ರಂದು 1 ಮತ್ತು 2 ನೇ ಆರೋಪಿತರು ಇನೋವಾ ವಾಹನದಲ್ಲಿ ಮಾಗಡಿ ರಸ್ತೆಯಲ್ಲಿ ಹೋಗುತ್ತಿರುವುದಾಗಿ ಚಾಸಾ.1 ರವರಿಗೆ ಮಾಹಿತಿ ಬಂದಿದ್ದು ಅದನ್ನು ನಮಗೆ ತಿಳಿಸಿರುತ್ತಾರೆ. ನಂತರ ನಾವೆಲ್ಲರೂ ಸದರಿ ಆರೋಪಿತರನ್ನು ಮಾಗಡಿ ರಸ್ತೆ ಸೀಗೇಹಳ್ಳಿ ಗೇಟ್ ಬಳಿ ಹಿಂಬಾಲಿಸಿಕೊಂಡು ಹೋಗಿದ್ದು ಆರೋಪಿತರು ಮಾಚೋಹಳ್ಳಿ ಫಾರೆಸ್ಟ್ ಗೇಟ್ ಕಡೆ ಹೋಗಿ ಅರಣ್ಯ ಪ್ರದೇಶದ ಒಳಗೆ ಹೋಗಿ ತಮ್ಮ ವಾಹನವನ್ನು ತೆಗೆದುಕೊಂಡು ಹೋಗುತ್ತಿದ್ದು ನಾನು ಸದರಿ ವಾಹನವನ್ನು ದಾಟಿ ಅದನ್ನು ತಡೆದು ನಿಲ್ಲಿಸಿರುತ್ತೇವೆ. ಆಗ ಸಂಜೆ 6.15 ಸಮಯ ಆಗಿತ್ತು. ನಾವೆಲ್ಲರೂ ನಮ್ಮ ವಾಹನದಿಂದ ಕಳಗೆ ಇಳಿದು ಹಿಡಿಯಲು ಹೋದಾಗ 2 ನೇ ಆರೋಪಿ ತನ್ನ ವಾಹನದಿಂದ ಇಳಿದು ಚಾಕುವಿನಿಂದ ನಮ್ಮ ಮೇಲೆ ಹಲ್ಲೆ ಮಾಡಲು ಪ್ರಯತ್ನಿಸಿ ನನ್ನ ಕುತ್ತಿಗೆಗೆ ಹಲ್ಲೆ ಮಾಡಲು ಬಂದಾಗ ನಾನು ತಪ್ಪಿಸಿಕೊಂಡಾಗ ನನ್ನ ಎಡಗೈ ತೋಳಿಗೆ ಪೆಟ್ಟು ಬಿದ್ದು ರಕ್ತಗಾಯ ಆಗಿರುತ್ತದೆ.

3. 1 ನೇ ಆರೋಪಿ ಒಂದು ಲಾಂಗ್ ನಿಂದ ಚಾಸಾ.3 ರವರಿಗೆ ಹೊಡೆಯಲು ಪ್ರಯತ್ನಿಸಿದಾಗ ಅವರ ತಪ್ಪಿಸಿಕೊಂಡಿದ್ದು ಅವರ ಎಡಗೈ ತೋಳಿಗೆ ಪೆಟ್ಟಾಗಿ ರಕ್ತಗಾಯ ಆಗಿರುತ್ತದೆ. ಆಗ ಚಾಸಾ.1 ರವರು ಆರೋಪಿತರಿಗೆ ಎಚ್ಚರಿಕೆ ನೀಡಿ ಗಾಳಿಯಲ್ಲಿ ಒಂದು ಸುತ್ತು ಗುಂಡು ಹಾರಿಸಿರುತ್ತಾರೆ. ಆದರೂ ಸಹ ಆರೋಪಿತರೂ ನಮ್ಮ ಮೇಲೆ ಹಲ್ಲೆ ಮಾಡಲು ಪ್ರಯತ್ನಿಸಿದಾಗ ಚಾಸಾ.1 ಮತ್ತು 4 ರವರು ಆರೋಪಿತರ ಮೇಲೆ 2 ಸುತ್ತು ಗುಂಡು ಹಾರಿಸಿರುತ್ತಾರೆ. ಈ ರೀತಿ ಗುಂಡು ಹಾರಿಸಿದಾಗ 1 ನೇ ಆರೋಪಿಯ ಬಲ ಹಿಮ್ಮಡಿಗೆ ಹಾಗೂ 2 ನೇ ಆರೋಪಿಯ ಬಲ ಕಾಲಿಗೆ ಗುಂಡೇಟು ಬಿದ್ದು ಸ್ಥಳದಲ್ಲಿ ಇಬ್ಬರೂ ಆರೋಪಿತರು ಬಿದ್ದಿರುತ್ತಾರೆ. ನಂತರ ಚಾಸಾ.1, 4 ಹಾಗೂ 5 ರವರು ನಮ್ಮನ್ನು ಹಾಗೂ ಆರೋಪಿತರನ್ನು ಉಪಚರಿಸಿ ನಾವು ಹೋಗಿದ್ದ ವಾಹನದಲ್ಲಿ ನಮ್ಮನ್ನು, ಆರೋಪಿತರನ್ನು ಚಿಕಿತ್ಸೆಗಾಗಿ ಅನುಪಮಾ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆದು ಗಾಯವಾಗಿದ್ದ ಶರ್ಟ್ ಅನ್ನು ನಮ್ಮ ಠಾಣೆಯ ಸಿಬ್ಬಂಧಿ ಪಡೆದಿರುತ್ತಾರೆ.

4. ದಿಃ08.08.2019 ರಂದು ನಾನು ಚಾಸಾ.19 ರವರಿಗೆ ಘಟನೆಯ ಬಗ್ಗೆ ಹೇಳಿಕೆ ನೀಡಿರುತ್ತೇನೆ. ಆರೋಪಿತರು ನಮ್ಮನ್ನು ಕೊಲ್ಲುವ ಉದ್ದೇಶದಿಂದ ನಮ್ಮ ಮೇಲೆ ಹಲ್ಲೆ ಮಾಡಿರುತ್ತಾರೆ. ಸಾಕ್ಷಿದಾರರು 2 ನೇ ಆರೋಪಿ ತನ್ನ ಮೇಲೆ ಹಲ್ಲೆ ಮಾಡಲು ಉಪಯೋಗಿಸಿದ ಮು.ಮಾ.5 ಅನ್ನು ನೋಡಿ ಗುರುತಿಸಿರುತ್ತಾರೆ. ಅದೇ ರೀತಿ 1 ನೇ ಆರೋಪಿ ಚಾಸಾ.3 ರವರ ಮೇಲೆ ಹಲ್ಲೆ ಮಾಡಲು ಉಪಯೋಗಿಸಿದ

ಮು.ಮಾ.4 ಲಾಂಗ್ ಅನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿದಾರರು ದೃಶ್ಯಾವಳಿ ಮೂಲಕ ಹಾಜರುಪಡಿಸಿದ 2ನೇ ಆರೋಪಿಯನ್ನು ನೋಡಿ ಗುರುತಿಸಿದ್ದು ಪ್ರತ್ಯೇಕಿಸಲ್ಪಟ್ಟ 1ನೇ ಆರೋಪಿಯನ್ನು ನೋಡಿದಲ್ಲಿ ಗುರುತಿಸುವುದಾಗಿ ನುಡಿದಿರುತ್ತಾರೆ. ಎಸ್.ಸಿ.ನಂಬರ್ 137/2022 ರಲ್ಲಿ ದೃಶ್ಯಾವಳಿ ಮೂಲಕ ನ್ಯಾಯಾಲಯದ ಮುಂದೆ ಹಾಜರುಪಡಿಸಿದ 1ನೇ ಆರೋಪಿ ಚಂದನ್ ಇವರನ್ನು ನೋಡಿ ಸಾಕ್ಷಿದಾರರು ಗುರುತಿಸಿರುತ್ತಾರೆ. ಆರೋಪಿತರು ಈ ರೀತಿ ಕೃತ್ಯ ಮಾಡಿದ ಕಾರಣ ನನಗೆ ಗಾಯ ಆಗಿ ನನ್ನ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ.

5. ಮಾನ್ಯ ಪಿಪಿ ರವರು ಒಂದು ಸೀಲ್ಡ್ ಕವರ್ ಓಪನ್ ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು. ಅದರಂತೆ ಕವರ್ ಓಪನ್ ಮಾಡಿ ಅದರಲ್ಲಿದ್ದ ಶರ್ಟ್ ಅನ್ನು ಸಾಕ್ಷಿದಾರರಿಗೆ ತೋರಿಸಿದ್ದು ಅದನ್ನು ಸಾಕ್ಷಿ ಗುರುತಿಸಿದ ಕಾರಣ ಶರ್ಟ್ ಅನ್ನು ಮು.ಮಾ.9 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿಪರ ವಕೀಲರಿಂದಃ</u>**

6. ಆರೋಪಿ ಪರ ವಕೀಲರನ್ನು ಕೂಗಿಸಿದ್ದು ಗೈರು ಹಾಜರಿದ್ದು ಆರೋಪಿ ತನ್ನ ಪರ ವಕೀಲರು ಮುಂದಿನ ತಾರೀಖಿನಂದು ಬರುವುದಾಗಿ ತಿಳಿಸಿದ್ದು ಯಾವುದೇ ಸಕಾರಣಗಳು ಇಲ್ಲವಾಗಿ ಆರೋಪಿಯ ಮನವಿಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.